ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.9063/2022

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

**<u>ಸಾಕ್ಷಿಗೆ ದಿಃ 02.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವೆರದ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

3 ವರ್ಷಗಳ ಹಿಂದೆ ದೂರನ್ನು ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ಮಹಜರಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2 (ಎ) ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ಮು. ಮಾ. ಗಳನ್ನು ಜಪ್ತು ಮಾಡಿರುತ್ತಾರೆ. ಮಹಜರ ಸಮಯದಲ್ಲಿ ಚಾಸಾ 3 ರಿಂದ 5 ಸಹ ಇದ್ದರು. ಮಹಜರವನ್ನು 10 ರಿಂದ 11 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ. ಮು. ಮಾ. ಗಳನ್ನು ಗುರುತಿಸುತ್ತೇನೆ. ಅವುಗಳನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರಃ ಆರ್.ಕೆ.ಆರ್ ವಕೀಲರಿಂದಃ**

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಹೆಸರನ್ನು ಮಾತ್ರ ಬರೆಯುತ್ತೇನೆ. ಆರೋಪಿತರ ಮತ್ತು ನನ್ನ ನಡುವೆ 3 ಸಿವಿಲ್ ವ್ಯಾಜ್ಯಗಳು ಇರುತ್ತವೆ. ಅವುಗಳ ಪೈಕಿ 1 ಎಸಿ ನ್ಯಾಯಾಲಯದಲ್ಲಿ 2 ಸಿವಿಲ್ ನ್ಯಾಯಾಲಯದಲ್ಲಿರುತ್ತವೆ. ದೂರನ್ನು ನಮ್ಮ ಊರಿನವರು ಜವರಪ್ಪಾ ಬರೆದಿರುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದರೆ ಸಾಕ್ಷಿ ಗೊತ್ತಿಲ್ಲ ನಾನು ಆಸ್ಪತ್ರೆಗೆ ಬಂದು ದಾಖಲು ಆಗಿರುತ್ತದೆಂದು ಹೇಳುತ್ತಾರೆ. ಚಾಸಾ 3 ನನ್ನ ಹೆಂಡತಿ ಚಾಸಾ 4 ನನ್ನ ತಂಗಿ. ಚಾಸಾ 5 ನಿಮ್ಮ ಹತ್ತಿರದ ಸಂಬಂಧಿ ಆಗಬೇಕು ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ.

ದೂರಿಗೆ ಸಹಿ ಹಾಕಿರುವುದನ್ನು ಬಿಟ್ಟು ನನಗೆ ಉಳಿದಂತೆ ಏನು ಗೊತ್ತಿಲ್ಲ. ಮಹಜರನಲ್ಲಿ ಏನು ಬರದಿದೆ ಎಂದು ನನಗೆ ಗೊತ್ತಿಲ್ಲ. ಮಹಜರನ್ನು ಎಷ್ಟು ಪುಟಗಳಲ್ಲಿ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸಹಿಯನ್ನು ಪೊ. ಠಾಣೆಯಲ್ಲಿ ಮಾಡಿರುತ್ತೇನೆ. ಪೊ.

ಠಾಣೆಯಲ್ಲಿ ಸಹಿ ಮಾಡಿರುವುದನ್ನು ಬಿಟ್ಟು ನನಗೆ ಏನು ಗೊತ್ತಿಲ್ಲವೆಂದರೆ ಸಾಕ್ಷಿ ಜ್ಞಾನ ಇರಲಿಲ್ಲವೆಂದು ಹೇಳುತ್ತಾರೆ. ಪೋಲಿಸರೆ ಬಂದು ಸಹಿ ಹಾಕುವಂತೆ ಹೇಳಿದ್ದು ನಾನು ಹಾಕಿರುತ್ತೇನೆಂದು ಹೇಳುತ್ತಾರೆ. ದೊಣ್ಣೆ ಯಾವ ಜಾತಿಯದೆಂದು ಗೊತ್ತಿಲ್ಲವೆಂದು ನೀಲಗಿರಿ ಮರದ್ದು ಎಂದು ಹೇಳುತ್ತಾರೆ. ಮು. ಮಾ. ಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಮು. ಮಾ. ನಮ್ಮ ಮನೆಯ ಬಾಗಿಲಿನಲ್ಲಿತ್ತು ಅದನ್ನು ತಗೆದುಕೊಂಡು ಹೊಡೆದಿರುತ್ತಾರೆ. ಮು. ಮಾ. ಗಳ ಮೇಲೆ ಸಹಿ ಇರುವುದಿಲ್ಲವೆಂದರೆ ಸರಿ.

ಮು. ಮಾ. ಗಳಂತಹ ಕಲ್ಲು ಊರಿನಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿತರ ಮೇಲೆ ಸಿವಿಲ್ ವ್ಯಾಜ್ಯ ಇದ್ದ ಕಾರಣ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು. ಮಾ. ಗಳಂತಹ ದೊಣ್ಣೆ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಆಸ್ಪತ್ರೆ ಹೋಗಿ ಚಿಕಿತ್ಸೆ ಪಡೆದಿಲ್ಲವೆಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ 15 ಬಾರಿ ಹೋಗಿರುತ್ತದೆ. ರಶೀದಿಯನ್ನು ತಂದು ಹಾಜರುಪಡಿಸುತ್ತೇನೆ. ನಾನು ಅಂಬ್ಯೂಲೇಸ್ಸನಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆ ಸಂಜೆ 6 ಗಂಟೆಯ ಸಮಯದಲ್ಲಿ ನನ್ನ ಹೆಂಡತಿ ಮತ್ತು ಪುಟ್ಟಯ್ಯ ಅವರೊಂದಿಗೆ ಹೋಗಿರುತ್ತೇನೆ. ಯಾವುದೇ ಗಲಾಟೆ ಆಗಿಲ್ಲ ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.